*ಶಿರಾಲಿ ದೀಪಕ್ ಆರ್. ಶೇಟ್, ಬೆಂಗಳೂರು*
*ಸಿಟ್ಟಿಗೆ 49 ನರ ಬೇಕು; ನಗೆಗೆ?*



ಒಂದೇ ವಾನರ ಸಾಕು!

*ಮಾಲತಿರಾಜು, ಬೆಂಗಳೂರು*
*ಮನುಷ್ಯ ಯಾವುದಕ್ಕೆ ಸಾಕು ಎನ್ನುತ್ತಾನೆ?*
ಹೆಂಡತಿಯ ಮಾತಿಗೆ!

*ವಸಂತಾ ಆನಂದ್, ಬೆಂಗಳೂರು*
*ನಗುವಿನಲ್ಲಿ ಅಳುವನ್ನು, ಅಳುವಿನಲ್ಲಿ ನಗುವನ್ನು ಕಾಣುವ ನನ್ನ ಗೆಳತಿಯನ್ನು ಏನೆಂದು ಸಂಬೋಧಿಸಲಿ?*
ಮೆಗಾ ಸೀರಿಯಲ್ ಪ್ರಿಯೆ!

*ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ*
*ಗುಣಕ್ಕೂ, ನಡತೆಗೂ ಏನು ವ್ಯತ್ಯಾಸ ರಾಮ್‌ಜೀ?*
ಗುಣ ವಿದ್ಯುತ್ ಆದರೆ ನಡತೆ ಬಲ್ಬ್. ಗುಣ ಟೆಸ್ಟರ್‌ಗೆ, ನಡತೆ ಜಗಕ್ಕೇ ತಿಳಿಯುತ್ತದೆ!

*ಎನ್.ಆರ್.ದೇಸಾಯಿ, ರಾಯಚೂರು*
*ಸುಧಾ ದಿನಪತ್ರಿಕೆಯಾಗಿದ್ದದ್ದರೆ ಬಹುಶಃ ಕ.ಬು.ಗೆ ಹೋಗುವ ಪ್ರಶ್ನೆಗಳಿಗೂ ಉತ್ತರ ದೊರಕುತ್ತಿತ್ತೇನೋ...?*




ಹ್ಞ! ಆಗ ಕ.ಬು. ಸಾಲುತ್ತಿರಲಿಲ್ಲ; ಕಸದ ಗುಡಾಣವನ್ನೇ ಕಟ್ಟಿಸಬೇಕಾಗುತ್ತಿತ್ತು.

*ಎಚ್. ಆನಂದ್ ಕುಮಾರ್, ಚಿತ್ರದುರ್ಗ*
*ಮಿ|| ರಾಮ್, ವಾರವಾರವೂ ಹೊಸತನದಲ್ಲಿ ಉತ್ತರಿಸುವ ತಮ್ಮ ಗುಟ್ಟೇನು?*
ಹೊಸತನವಿಲ್ಲದಿದ್ದರೆ ಅಂಕಣದಿಂದ ಸುಧಾ ನನ್ನನ್ನು ದಬ್ಬಿಬಿಡುವಳೆಂಬ ಭೀತಿ!

*ಎಸ್.ಜಿ. ರಾಜಶೇಖರ ರೆಡ್ಡಿ, ಕಿರೇಕೊಳಂ*
*ಪಂಚಭೂತಗಳ ಸಾಕ್ಷಿಯಾಗಿ ಎನ್ನುತ್ತಾರಲ್ಲಾ, ಆ ಭೂತಗಳು ಯಾವುವು ಸ್ವಾಮಿ?*
ಅತ್ತೆ, ಮಾವ, ವಿಡಿಯೋ/ಫೋಟೋಗ್ರಾಫರ್, ಇಬ್ಬರು ಪುರೋಹಿತರು!

*ಪಿ.ಗೋವಿಂದರಾಜ್, ಶಿವಮೊಗ್ಗ*
*ತಾಯಿ, ಹೆಂಡತಿ ಧರಿಸುವ ಸೀರೆ ಒಂದೇ ಆದರೂ, ಸೀರೆಯಲ್ಲಿನ ವ್ಯಕ್ತಿಗಳ ಗುಣಗಳೇ ಬೇರೆ; ಅದು ಹೇಗೆ?*
ದೃಷ್ಟಿ ಸರಿಯಿದ್ದರೆ ಸೃಷ್ಟಿ ಸರಿಯಿರುತ್ತದೆ; ನಿಮ್ಮ ದೃಷ್ಟಿಕೋನ ಬದಲಾಯಿಸಿ ನೋಡಿ.

*ಶಿವಮೊಗ್ಗ ರಮೇಶ್, ಮೈಸೂರು*
*ಮೂರೂ ಬಿಟ್ಟವರು ದೇಶಕ್ಕೆ ದೊಡ್ಡವರು ಎನ್ನುತ್ತಾರಲ್ಲ, ಹೇಗೆ ಸಾರ್?*
ಗೊತ್ತಿಲ್ಲಪ್ಪ! ನಾನಿನ್ನೂ ಮೂರನ್ನೂ ಬಿಟ್ಟಿಲ್ಲ.

*ಮಹೇಂದ್ರಕುಮಾರ್ ಉಪ್ಪುಂದ, ಕುಂದಾಪುರ*
*ಈಗಿನ ಹುಡುಗಿಯರಿಗೆ ಸಹಿಸಲು ಸಾಧ್ಯವಾಗದ ವಿಚಾರ ಯಾವುದು?*
ದಪ್ಪ ಆಗುವುದು!

*ಕೇಶವ ಎನ್ ಪೈ, ಹೊನ್ನಾವರ*
*ಮದುವೆ ಎಂಬ ಮೂರಕ್ಷರದಲ್ಲಿ ಏನಿದೆ?*
ಮಹತ್ತರವಾದ ದುಂದು ವೆಚ್ಚ ಎಂದರು ಡಾ.ಮಾಸ್ತರ್ ಹಿರಣ್ಣಯ್ಯನವರು!

*ಎಂ.ಬಿ.ಚೋದಾನಪುರ, ಸವದತ್ತಿ*
*ಹಲ್ಲು ಕಡಿಯುವ ಚಟವುಳ್ಳವನು ಗಂಡನಾಗಿ ದೊರೆತರೆ ಹೆಂಡತಿಯ ಪಾಡೇನು?*
ಹೆಂಡತಿ ಕಬ್ಬಿಣದ ಕಡಲೆ ಆದರಾಯ್ತು!

*ಬಾ.ರಂ.ಸುರೇಶ್, ಶಿವಮೊಗ್ಗ*
*ಗಂಡ ಹೆಂಡಿರ ಸಂಬಂಧ ಜನ್ಮಜನ್ಮದ ಅನುಬಂಧವಾದರೂ ಜಗಳ ಆಗುವುದೇಕೆ?*
ಮನರಂಜನೆಗಾಗಿ!

*ಮುರಳೀಧರ ಕುಲಕರ್ಣಿ, ಬೀದರ್*
*ಮಹಾತ್ಮಾ ಗಾಂಧಿ ರಸ್ತೆಯಲ್ಲೇ ಹೆಚ್ಚಾಗಿ ಬಾರ್ ಮತ್ತು ಮಾಂಸಾಹಾರದ ಹೊಟೆಲ್‌ಗಳಿವೆಯಲ್ಲಾ...?*
ಅವರ ಜೀವನವೂ ಅವುಗಳನ್ನು ದಾಟಿ ಮುನ್ನಡೆಯಿತೆಂದು ಸೂಚಿಸಲು!

*ಎಂ.ಕೆ. ರಾಜೇಶ್, ಚಾಮರಾಜನಗರ*
*ನನ್ನ ವಿವಾಹಕ್ಕೆ ಇಲ್ಲೊಬ್ಬಳು ವಧು ಗ್ಯಾರಂಟಿ ಕಾರ್ಡ್ ಕೇಳುತ್ತಿದ್ದಾಳಲ್ಲಾ...?*
ಛೆ! ಅದು ಗ್ಯಾರಂಟಿ ಅಲ್ಲ, ಗೋರಂಟಿ ಕಾರ್ಡ್ ಅಂತೆ!

## ಬಹುಮಾನಿತ ಪ್ರಶ್ನೆ

*ಹೆಚ್.ಎನ್.ವಿಶ್ವನಾಥ್, ಶಿವಮೊಗ್ಗ*
*ಹೆಂಡತಿಯೊಬ್ಬಳು ಮನೆಯೊಳಗಿದ್ದರೆ... ಕೋಟಿ ರೂಪಾಯಿ; ಪ್ರೇಯಸಿಯೊಬ್ಬಳು ಇದ್ದರೆ...?*
ಅವಳ ಮನೆಯಲ್ಲಿ ಅವಳಿದ್ದರೆ ನಿಮಗೇನು ಲಾಭ ಬಿಡಿ!

*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ದಿನಗಳು ಕಳೆದರೆ ವಯಸ್ಸು ಬೆಳೆಯುತ್ತೆ, ವಯಸ್ಸು ಕಳೆದರೆ ದಿನಗಳು ಬೆಳೆಯುವುದು ಯಾವಾಗ?*
ಗರ್ಭಿಣಿಗೆ ನವಮಾಸ ತುಂಬಿದಾಗ!

*ಎಂ.ಎಸ್.ಧರ್ಮೇಂದ್ರ, ಜಿ.ಟಿ.ಆರ್.ಇ.ಕ್ಯಾಂಪಸ್*
*ಗಾಂಧೀಜಿಯ ಹೆಸರು ಹೇಳಲು ಯೋಗ್ಯತೆಯಿಲ್ಲದ ರಾಜಕಾರಣಿಗಳು ಗಾಂಧಿ ಜಯಂತಿ ಆಚರಿಸುವ ಗುಟ್ಟೇನು?*
ಪಾಪ! ಅವರು ಗಾಂಧಿ ಎಂದರೆ ಸೋನಿಯಾಗಾಂಧಿಯ ಅಪ್ಪ ಎಂದುಕೊಂಡಿರುತ್ತಾರೇನೋ. ಕಾಕಾ ಹಿಡಿಯಲು ಈ ಯತ್ನವಷ್ಟೆ!

*ನಾಗದೇವಾಡಿಗ, ಕಂಬದಕೋಣೆ*
*ಸಿನಿಮಾ ನಟಿಯರು ಹೆಚ್ಚಾಗಿ ಶ್ರೀಮಂತ ಉದ್ಯಮಿಗಳನ್ನೇ ವರಿಸುವುದೇಕೆ?*



ಆವರಿಸುವುದು ಕಡಿಮೆ, ಸಾವರಿಸುವುದು ಹೆಚ್ಚಾದ್ದರಿಂದ!

*ಗಾಯತ್ರಿ, ರಾಜಾಜಿನಗರ*
*ಹಿತ್ತಲಗಿಡ ಮದ್ದಲ್ಲ ಅಂತಾರಲ್ಲಾ...?*
ಈಗ ಹಿತ್ತಲೂ ಇಲ್ಲ, ಗಿಡವೂ ಇಲ್ಲವಾದ್ದರಿಂದ ಮದ್ದಿನ ಪ್ರಶ್ನೆಯೇ ಇಲ್ಲ ಬಿಡಿ.

*ಜಿ.ಎನ್.ಪ್ರಸನ್ನ ಕುಮಾರ್, ತುಮಕೂರು*
*ಸತ್ಯದ ದಾರಿ ಹಿಡಿದರೆ ಯಶಸ್ಸು ಕಷ್ಟದಿಂದಲೂ, ತಡವಾಗಿಯೂ ಸಿಗುವುದು. ಹೀಗೇಕೆ?*
ಸತ್ಯದ ದಾರಿ ಬೆಂಗಳೂರಿನ ರಸ್ತೆಗಳಂತೆ ಬರೀ ಹಂಪು, ಹಳ್ಳಗಳಿಂದ ತುಂಬಿರುವುದರಿಂದ!

■ ರಾಮ್